IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಕುವೆಂಪು–ತೇಜಸ್ವಿ ಅವರ ಸಾಹಿತ್ಯದಲ್ಲಿ : ಸ್ಥಳೀಯ ಜ್ಞಾನ ಮತ್ತು ಲೋಕ ನಿರ್ಮಿತಿಯ ಸಾಧ್ಯತೆಗಳು

ಮಹಾಂತೇಶ.ಎಂ

(20203KAN0004)

ಸಂಶೋಧನಾರ್ಥಿ

ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ

ಬೆಂಗಳೂರು–560064

ಡಾ.ಕೆ.ಮಲರ್‌ವಿಳಿ

ಮಾರ್ಗದರ್ಶಕರು

ಕನ್ನಡ ವಿಭಾಗ

ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ

ಬೆಂಗಳೂರು–560064

ಜ್ಞಾನಮೀಮಾಂಸೆಯ ಚರ್ಚೆ ಆರಂಭಿಸುವ ಮೊದಲು ಜ್ಞಾನವೆಂದರೇನು? ಎನ್ನುವುದನ್ನು ಯೋಚಿಸಬೇಕಾಗುತ್ತದೆ. ಮಾಹಿತಿ, ವಿವರಣೆ, ಸತ್ಯ ಮತ್ತು ಕುಶಲತೆ ಮುಂತಾದ ಸಂಗತಿಗಳನ್ನು ಅನುಭವ ಅಥವಾ ಶಿಕ್ಷಣದ ಮೂಲಕ ಹೊಂದಿದ ಪರಿಚಯವೇ ಜ್ಞಾನ. ಇದು ತಾತ್ವಿಕ ಮತ್ತು ಪ್ರಾಯೋಗಿಕ ಎರಡು ನೆಲೆಗಳನ್ನು ಹೊಂದಿದೆ. ಒಂದು ರೀತಿಯಲ್ಲಿ ಜ್ಞಾನ ಔಪಚಾರಿಕತೆಯನ್ನು ಮತ್ತು ಕ್ರಮಬದ್ಧತೆಯನ್ನು ಹೊಂದಿದೆ. ಅಂತಹ ಜ್ಞಾನದ ತಾತ್ವಿಕ ಅಧ್ಯಯನವೇ ಜ್ಞಾನಮೀಮಾಂಸೆ.

ಪ್ಲೇಟೋ ಪ್ರಕಾರ ಜ್ಞಾನವೆಂದರೆ "ಮನ್ನಿತ ಸತ್ಯ ನಂಬಿಕೆಗಳು"('ಜಸ್ಟಿಫೈಡ್ ಟ್ರೂ ಬಿಲೀಫ್'), ನ್ಯಾಯಿಕ ಸತ್ಯವಾದ ಇಂತಹ ನಂಬಿಕೆಗಳು ಜ್ಞಾನವೆಂದು ಅರ್ಥೈಸಲ್ಪಡುತ್ತದೆ. ಅಂದರೆ ಇಲ್ಲಿ ಸತ್ಯ ನಂಬಿಕೆ, ನ್ಯಾಯಬದ್ಧತೆ ಈ ಮೂರು ವಿಚಾರಗಳಿಗಿಂತ ಜ್ಞಾನ ಭಿನ್ನ. ಇವುಗಳ ಸಂಯೋಗದಿಂದ ಜ್ಞಾನದ ಉತ್ಪತ್ತಿಯಾಗುತ್ತದೆ ಎಂದು ಭಾವಿಸಲಾಗುತ್ತದೆ. ಅಂದರೆ ಜ್ಞಾನವೆನ್ನುವುದು ಸತ್ಯ ನಂಬಿಕೆ ನ್ಯಾಯಬದ್ಧತೆಗಳಿಗಿಂತ ಭಿನ್ನವಾದುದು. ಸತ್ಯವೆಂದರೆ ವಾಸ್ತವವಾಗಿರುವಂತದ್ದು ಎಲ್ಲರಿಂದ ಸ್ವೀಕೃತವಾಗಿರುವಂತದ್ದು ಎಂದೂ, ನಂಬಿಕೆಗಳು ನಮ್ಮ ಮಾನಸಿಕ ವ್ಯಾಪಾರಕ್ಕೆ ಸಂಬಂಧಿಸಿದ್ದು. ಅಂದರೆ ಜ್ಞಾನವೆನ್ನುವುದು ನ್ಯಾಯಬದ್ಧ ಅಥವಾ ತರ್ಕಬದ್ಧ ಸತ್ಯವನ್ನು ನಂಬಿಕೆಯನ್ನಾಗಿ ಸ್ವೀಕರಿಸುತ್ತದೆ. ಹೀಗೆ ಜ್ಞಾನ, ಸತ್ಯ ಮತ್ತು ನಂಬಿಕೆಗಳ ಸಂಬಂಧದಲ್ಲಿ ಉಂಟಾಗುತ್ತದೆ. ಅರಿಸ್ಟಾಟಲ್ ಇನ್ನೂ ಮುಂದೆ ಹೋಗಿ ಸತ್ಯ ಎನ್ನುವುದು ತರ್ಕಸಮ್ಮತ ಕಾರಣಗಳೊಂದಿಗೆ ಇರಬೇಕೆಂದು ಹೇಳಿದ್ದಾನೆ.

ಆಕ್ಸಫರ್ಡ್ ಡಿಕ್ಷನರಿ ಪ್ರಕಾರ, “ನಮ್ಮ ಅನುಭವ ಅಥವಾ ಶಿಕ್ಷಣದಿಂದ ಪಡೆದ ಮಾಹಿತಿ ಅಥವಾ ಜಾಗೃತಿ, ಅಥವಾ ವ್ಯಕ್ತಿ, ವಿಷಯ ವಸ್ತುಗಳನ್ನು ಕುರಿತು ಅನುಭವದಿಂದ ಪಡೆದ ಅರಿವು”. ಎನ್ನುವ ಅರ್ಥದಲ್ಲಿ ಜ್ಞಾನವನ್ನು ವ್ಯಾಖ್ಯಾನಿಸಲಾಗಿದೆ. ಈ ಮೇಲಿನ ಹೇಳಿಕೆಗಳನ್ನು ಗಮನಿಸಿದಾಗ ಜ್ಞಾನವು ಸತ್ಯ ನಂಬಿಕೆ, ನ್ಯಾಯಬದ್ಧತೆಗಳಿಂದ ಭಿನ್ನವೆಂದು ಸ್ಪಷ್ಟವಾಗುತ್ತದೆ. ಅದೇ ರೀತಿ ಜ್ಞಾನವು ಅನುಭವ ಮತ್ತು ಶಿಕ್ಷಣದಿಂದ ಪಡೆದಿದ್ದಾಗಿದೆ. ಅದ್ದರಿಂದ ಒಂದು ಸ್ಪಷ್ಟ ಸಂಗತಿಯೇನೆಂದರೆ, ವಿಜ್ಞಾನಕ್ಕಿಂತಲೂ ಜ್ಞಾನ ಭಿನ್ನವೆಂದರ್ಥ. ಎಲ್ಲಾ ಪ್ರಾಯೋಗಿಕತೆಯ ಮೂಲಕ ಪಡೆದ ಜ್ಞಾನ ಜ್ಞಾನವೆಂದರ್ಥವಲ್ಲ. ಅದು ಒಂದು ಮಾಹಿತಿ ಅಥವಾ ತಿಳುವಳಿಕೆ ಅಷ್ಟೇ, ಒಟ್ಟಾರೆ ಜ್ಞಾನವನ್ನು ಹೀಗೆಯೇ ಎಂದು ನಿರ್ವಚಿಸುವುದು ಕಷ್ಟ. ಇಂದಿಗೂ ಕೂಡಾ ವಿದ್ವಾಂಸರಲ್ಲಿ ತಾತ್ವಿಕರಲ್ಲಿ ಸಾಕಷ್ಟು ಈ ಕುರಿತು ಚರ್ಚೆಗಳು ನಡೆಯುತ್ತಲೇ

ಇದೆ. ಪ್ಲೇಟೋ ಹೇಳಿದ ನ್ಯಾಯಿಕ ಸತ್ಯ ಮತ್ತು ನಂಬಿಕೆಯಿಂದ ಹಿಡಿದು ಆಧುನಿಕೋತ್ತರವಾದಗಳು ಹೇಳುವ ಎಲ್ಲವೂ ಜ್ಞಾನ ಎನ್ನುವಲ್ಲಿಯವರೆಗೆ ಇದು ತನ್ನ ವ್ಯಾಪ್ತಿಯನ್ನು ಒಳಗೊಳ್ಳುತ್ತದೆ.

ಆಧುನಿಕ ಜ್ಞಾನಮೀಮಾಂಸೆಯ ಕುರಿತು ಚರ್ಚಿಸುವ ಮೊದಲು ಅದಕ್ಕೆ ಹಿನ್ನಲೆಯಾಗಿ 'ಜ್ಞಾನ' ಮತ್ತು 'ಜ್ಞಾನಮೀಮಾಂಸೆ' ಎನ್ನುವ ಪರಿಕಲ್ಪನೆಗಳನ್ನು ವಿವರಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಜ್ಞಾನಮೀಮಾಂಸೆಯ ಅರ್ಥ, ವ್ಯಾಖ್ಯೆ ಲಕ್ಷಣಗಳು, ಅದರ ಐತಿಹಾಸಿಕ ಬೆಳವಣಿಗೆ, ಜ್ಞಾನ ಮತ್ತು ಜ್ಞಾನಮೀಮಾಂಸೆಯ ವ್ಯಾಪ್ತಿ ಇತ್ಯಾದಿ ಸಂಗತಿಗಳನ್ನು ಚರ್ಚಿಸಲಾಗುವುದು. ಯಾವುದೇ ಶಬ್ದವನ್ನು ಒಂದೇ ಒಂದು ನೆಲೆಯಲ್ಲಿ ನಿಶ್ಚಿತವಾದ ಅರ್ಥ ಉದ್ದೇಶದೊಂದಿಗೆ ಏಕಮುಖಿಯಾಗಿ ವಿವರಿಸುವುದು ಅಸಾಧ್ಯ ಚೋಮ್ಸ್ಕಿ ಹೇಳುವಂತೆ, "ಭಾಷೆ ಮತ್ತು ಸಂವಹನದ ಬೆಳವಣಿಗೆ ಸಮಾಜ ಕೊಡಮಾಡುವ ಸಾಮಾಜಿಕ ಸಾಧನಗಳು." ಜಗತ್ತಿನಲ್ಲಿ ನಾನಾ ತೆರನಾದ ಸಮಾಜಗಳು ಇರುವ ಕಾರಣ ನಾನಾ ವಿಧವಾದ ಜ್ಞಾನ ಮತ್ತು ಜ್ಞಾನಮೀಮಾಂಸೆ ಕೂಡಾ ಅಸ್ತಿತ್ವದಲ್ಲಿದೆ. ಇಡೀ ಯೂರೋಪನ್ನು ಒಂದೇ ಒಂದು ಚೌಕಟ್ಟಿನಲ್ಲಿಟ್ಟು ಯೂರೋಪ್ ಸೃಷ್ಟಿಸಿದ ಜ್ಞಾನಮೀಮಾಂಸೆ ಎನ್ನುವ ನೆಲೆಯಲ್ಲಿ ನಾವು ನೋಡಲು ಸಾಧ್ಯವಿಲ್ಲ. ಇಂತಹ ಗ್ರಹಿಕೆ ಮತ್ತು ಅಭಿಪ್ರಾಯಗಳು ಕೂಡಾ ಅಪಾಯದ್ದು. ಉದಾಹರಣೆಗೆ, ಒರಿಯಂಟಲಿಸಂ ಮತ್ತು ಅದರ ಕುರಿತಾದ ಜ್ಞಾನದ ಬೆಳವಣಿಗೆಯನ್ನು ಎಡ್ವರ್ಡ್ ಸೈದ್ ಸಹಿತ ಅನೇಕ ಚಿಂತಕರು ಸಾಮ್ರಾಜ್ಯಶಾಹಿಯ ಒಂದು ಭಾಗವಾಗಿಯೇ ಗ್ರಹಿಸಿದ್ದಾರೆ. ಇದು ತಪ್ಪೆನ್ನುವ ಹಾಗಿಲ್ಲ. ಆದರೆ 'ಒರಿಯಂಟಲಿಸಂ' ಎನ್ನುವಂತಹ ಜ್ಞಾನಮೀಮಾಂಸೆಯನ್ನು ಅಥವಾ ಜ್ಞಾನದ ಉದ್ಯಮವನ್ನು ಕೂಡಾ ಯೂರೋಪಿನ ಅನೇಕ ದೇಶಗಳು ಏಷ್ಯಾದ ಬಗೆಗೆ, ಅರೇಬಿಯಾದ ಬಗೆಗೆ ಒಟ್ಟಾರೆಯಾಗಿ ಯೂರೋಪಿನ ಪೂರ್ವದ ಬಗ್ಗೆ ತಿಳಿಸಿವೆ. ಇಂಗ್ಲೆಂಡ್ ಮತ್ತು ಫ್ರಾನ್ಸ್ ಸೃಷ್ಟಿಸಿರುವ ಒರಿಯಂಟಲಿಸ್ಟ್ ಎಂಬುದು ಜ್ಞಾನದ ಉದ್ಯಮ; ಜರ್ಮನಿ ಸೃಷ್ಟಿಮಾಡಿದ ಒರಿಯಂಟಲಿಸ್ಟ್ ಜ್ಞಾನದ ಉದ್ಯಮಕ್ಕಿಂತ ಇದು ಬಹಳ ಭಿನ್ನವಾದುದು. ಇದರ ಉದ್ದೇಶಗಳೂ ಕೂಡಾ ಭಿನ್ನ ಮತ್ತು ವೈವಿಧ್ಯಮಯವಾದುದು. ಆಧುನಿಕ ಚಿಂತಕರ ಪ್ರಕಾರ, ಜರ್ಮನಿ ಅತ್ಯಂತ ವ್ಯಾಪಕವಾಗಿ 'ಇಂಡೋಮ್ಯಾನಿಯಾ' ಎನ್ನುವ ಹೆಸರಿನಲ್ಲಿ ಒರಿಯಂಟಲಿಸ್ಟ್ ಎಪಿಸ್ಟಮಲಜಿಯನ್ನು ಸೃಷ್ಟಿಸಿದ್ದು ಹರಿದು ಹಂಚಿಹೋಗಿದ್ದ ಜರ್ಮನಿಯನ್ನು ಏಕೀಕರಣಗೊಳಿಸಲಿಕ್ಕಾಗಿ. ಇಂಗ್ಲೆಂಡ್, ಫ್ರೆಂಚ್ ಸಂದರ್ಭದ ಯಾಜಮಾನ್ಯ ಮಾದರಿಯ ಒರಿಯಂಟಲಿಸಂ ಇದರ ಉದ್ದೇಶವಾಗಿರಲಿಲ್ಲ. ಹಾಗಾಗಿ ಒಟ್ಟಾರೆಯಾಗಿ ಈ ಅಧ್ಯಾಯದಲ್ಲಿ ಜ್ಞಾನ ಅಥವಾ ಕಾವ್ಯಮೀಮಾಂಸೆಯನ್ನು ಚೌಕಟ್ಟಿನಲ್ಲಿಟ್ಟು ನೋಡುವ ಕ್ರಮವೇ ಅತ್ಯಂತ ಅಪಾಯಕಾರಿ ಎಂದು ಭಾವಿಸುತ್ತೇನೆ.

ಜ್ಞಾನಮೀಮಾಂಸೆಯ ವಿಚಾರಗಳು ಬಂದಾಗ, ಎರಡು ಸಂಗತಿಗಳು ನಮಗೆ ಮುಖ್ಯವಾಗುತ್ತದೆ. ಒಂದು, ಜ್ಞಾನವೆನ್ನುವುದು ಹಿರಿಯರ ಹೆಗಲ ಮೇಲೆ ನಿಂತ ಅನುಭವವನ್ನು ಸಂಕೇತಿಸುತ್ತದೆ. ಒಂದು ರೀತಿ ಮಾರ್ಕ್ಸ್ ಹೇಳುವ ಹಾಗೆ 'ಡಯಲೆಕ್ಟಿಕಲ್ ಮೆಟಿರಿಯಲಿಸಂ' ಎಂಬುದು ಮೇಲಿನ ಹೇಳಿಕೆಯನ್ನು ಸಮರ್ಥಿಸುತ್ತದೆ. ಎರಡನೆಯದು, ಜ್ಞಾನ ಅಥವಾ ಜ್ಞಾನಮೀಮಾಂಸೆ ಇದು ನಿರ್ವಾತದಲ್ಲಿ ಸೃಜಿಸುವುದಿಲ್ಲ ಅದರ ಬದಲಾಗಿ ಒಂದು ಸಮಾಜ ಆ ಸಮಾಜದ ಬೇಡಿಕೆಯಾಗಿ ರೂಪುಗೊಳ್ಳುತ್ತದೆ. ಒಟ್ಟಾರೆಯಾಗಿ ಜ್ಞಾನ ಸೃಷ್ಟಿಯಾದ ಭೌತಿಕ ಪರಿಸರ ಜ್ಞಾನವನ್ನು ಸಾಕಷ್ಟು ಇದು ಪ್ರಭಾವಿಸುತ್ತದೆ. ಜ್ಞಾನವನ್ನು ವಿಭಾಗೀಕರಿಸಿ ನೋಡುವ ಕ್ರಮವೇ ಸರಿ ಅದರ ಹೊರತು , ಅಂದರೆ ಫ್ರಾನ್ಸಿಸ್ ಬೇಕನ್ ಹೇಳುವ ಜ್ಞಾನದ ವರ್ಗೀಕರಣ ಸೂಕ್ತ. ಇದೇ ಜ್ಞಾನ ಅಥವಾ ಭಾರತಿಯ ದರ್ಶನಗಳಲ್ಲಿ ಬರುವ ಹಾಗೆ 'ಇದಮಿತ್ಥಂ' ಎನ್ನುವ ಮನೋಭೂಮಿಕೆ ಅತ್ಯಂತ ಅಪಾಯಕಾರಿ ಎನ್ನಬಹುದು. ಜ್ಞಾನ ಒಂದು ರೀತಿ ಸಮಗ್ರ ಮತ್ತು ಪ್ರಜಾಪ್ರಭುತ್ವದ ಹಿನ್ನೆಲೆ ಎನ್ನುವುದೇ ನನ್ನ ಗ್ರಹಿಕೆ.

ಲೋಕನಿರ್ಮಿತಿಯ ಸಾಧ್ಯತೆಗಳಲ್ಲಿ ಮೇಲಿನ ಗ್ರಹಿಕೆಗಳನ್ನು ಹೊಂದಿಯೂ ಕೂಡಾ ನಾವು ಜ್ಞಾನವನ್ನು, ಜ್ಞಾನಮೀಮಾಂಸೆಯನ್ನು 'ಇಸಂ'ಗಳ ರೂಪದಲ್ಲಿ ನೋಡುತ್ತೇವೆ. ಇಲ್ಲಿನ 'ಇಸಂ'ಗಳೆಂದರೆ ಸಂಪೂರ್ಣ ಸ್ವತಂತ್ರವಾದ ಜ್ಞಾನಮೀಮಾಂಸೆಯ ಅಭಿವ್ಯಕ್ತಿಗಳಲ್ಲ. ಬದಲಿಗೆ ಪ್ರತಿಯೊಂದು ಕೂಡಾ ಬೇರೆ ಬೇರೆ ನೆಲೆ ಮತ್ತು ಆಯಾಮಗಳಲ್ಲಿ , ಬೇರೆ ಬೇರೆ 'ಇಸಂ'ಗಳನ್ನು ಆಶ್ರಯಿಸಿ ಅವುಗಳಿಗೆ ಹೊಂದಿಕೊಂಡು ಬೆಳೆದಂತೆ ಪರಿಕಲ್ಪನೆಗಳೆಂದೇ ಅಧ್ಯಯನ ಮಾಡುತ್ತೇವೆ. ಆದರೆ ಚಾರಿತ್ರಿಕವಾಗಿ ಜ್ಞಾನ, ಜ್ಞಾನಮೀಮಾಂಸೆಯ ಹಲವು ಕವಲುಗಳು ಅಥವಾ ಲಕ್ಷಣಗಳಾಗಿ ಅಥವಾ ಕಾಲದೇಶಾಧಾರಿತ ಗುರುತುಗಳಾಗಿ ಇರುವ ಕಾರಣ. ಅವುಗಳನ್ನು ಚಾರಿತ್ರಿಕ ವಿಕಾಸದ ರೂಪದಲ್ಲಿ ಗಮನಿಸುತ್ತೇವೆ. ಆಧುನಿಕ ಜ್ಞಾನಮೀಮಾಂಸೆಯ ಕುರಿತು ವಿವಿಧ ರೀತಿಯ ಚರ್ಚೆಗಳು ಕಂಡು ಬರುವ ಹಿನ್ನಲೆಯಲ್ಲಿ ಆಧುನಿಕ ಜ್ಞಾನ

ಮೀಮಾಂಸೆಯ ಉಗಮದ ಹಿಂದಿನ ಚಾರಿತ್ರಿಕ ಸನ್ನಿವೇಶವನ್ನು ಚರ್ಚಿಸುವುದು ಮತ್ತು ಆಧುನಿಕತೆಯ ಕುರಿತಿರುವ ವಾಗ್ವಾದಗಳನ್ನು ಇಲ್ಲಿ ಗಮನಿಸಬಹುದು.

ಮನುಷ್ಯನ ಸಾಮಾಜಿಕ ಕೌಟುಂಬಿಕ ಜಗತ್ತು ತಾನು ಬದುಕಿರುವ ಪ್ರದೇಶ, ಪರಿಸರ, ಆಹಾರ, ಆಚಾರ–ವಿಚಾರ,ಸಂಸ್ಕೃತಿ, ಉಡುಗೆ–ತೊಡುಗೆ, ಊಟೋಪಚಾರ ಮತ್ತು ಭೌಗೋಳಿಕ ವಾತಾವರಣದಿಂದ ರೂಪಿಸಲ್ಪಟ್ಟಿರುತ್ತದೆ. ಜ್ಞಾನ ಎನ್ನುವುದು ಕೂಡ ನಿರ್ದಿಷ್ಟ ಭೌಗೋಳಿಕತೆಗೆ ಮತ್ತು ಪ್ರಾದೇಶಿಕತೆಗೆ ಸಂಬಂಧಿಸಿದಂತೆ ಸಂಸ್ಕೃತಿ ಹಾಗೂ ಜನಜೀವನ ರೂಪುಗೊಳ್ಳುತ್ತಾ ಹೋಗುತ್ತದೆ. ಲೋಕಜ್ಞಾನ ಸ್ಥಳೀಯ ಜ್ಞಾನದೊಂದಿಗೆ ರೂಪಗೊಳ್ಳುವುದನ್ನು ನಾವು ಕಾಣಬಹುದು. ಜಗತ್ತಿನ ಯಾವುದೇ ಮೂಲೆಗೋದರೂ ಆ ಜಾಗದ ಆ ಭೌಗೋಳಿಕತೆಗೆ ಸಂಬಂಧಪಟ್ಟಂತಹ ಸ್ಥಳೀಯ ಜ್ಞಾನಗಳು ಸಂಸ್ಕೃತಿಯಾಗಿಯೂ, ಕಲೆಯಾಗಿಯೂ ಸಾಹಿತ್ಯವಾಗಿಯೂ ಅಥವಾ ಇನ್ನಿತರ ವಿದ್ಯಮಾನಗಳಾಗಿಯೂ ರೂಪುಗೊಂಡಿರುತ್ತವೆ. ಒಂದು ಸಾಹಿತ್ಯ ಪಠ್ಯ ಅಥವಾ ಒಂದು ಸಾಂಸ್ಕೃತಿಕ ಪಠ್ಯ ರೂಪಗೊಳ್ಳುವ ಹಿನ್ನೆಲೆಯೇ ಈ ಕ್ರಮದ್ದಾಗಿರುತ್ತದೆ. ಒಂದು ಸಾಹಿತ್ಯ ಪಠ್ಯ ಅಥವಾ ಸಾಂಸ್ಕೃತಿಕ ಪಠ್ಯರೂಪುಗೊಳ್ಳುವ ಹಿನ್ನೆಲೆಯಲ್ಲಿ ಭೌಗೋಳಿಕತೆ, ಸ್ಥಳೀಯ ಜ್ಞಾನ, ದೇಸಿ ಜ್ಞಾನ, ಜಾನಪದ ಜ್ಞಾನ ಅಥವಾ ಆ ನೆಲದ ಮೂಲ ಗುಣಗಳನ್ನು ಹೊಂದಿರುವಂತಹ ತಿಳುವಳಿಕೆ ಅಪಾರವಾಗಿ ಒಂದು ಸಂಸ್ಕೃತಿಯನ್ನು ರೂಪಿಸಿರುತ್ತದೆ ಮತ್ತು ಪ್ರಭಾವಿಸಿರುತ್ತದೆ. ಈ ದೃಷ್ಟಿಯಲ್ಲಿ ಲೋಕ ನಿರ್ಮಿತಿ ಎನ್ನುವುದೇ ಸಮಗ್ರವಾಗಿ ಒಂದು ಎಂದು ಹೇಳಲು ಆಗುವುದಿಲ್ಲ. ಲೋಕ ನಿರ್ಮಿತಿ ಎಂಬುದನ್ನು ನಾವು ಎಷ್ಟು ಬಗೆಯ ಭೌಗೋಳಿಕ ವಿಭಿನ್ನತೆ ಮತ್ತು ಅನನ್ಯತೆ ಸಾಂಸ್ಕೃತಿಕ ಭಿನ್ನತೆ ಮತ್ತು ಇನ್ನಿತರ ಯಾವುದೇ ಸಾಧ್ಯತೆಗಳ ದೃಷ್ಟಿಯಲ್ಲಿ ನೋಡಿದಾಗ ಹಲವು ಆಯಾಮಗಳಲ್ಲಿ ಲೋಕ ನಿರ್ಮಿತಿಗಳಿರುತ್ತವೆ. ಭೌಗೋಳಿಕತೆ ರೂಪುಗೊಳ್ಳುತ್ತಾ ಅಥವಾ ಭಿನ್ನವಾಗುತ್ತಾ ಹೋದಂತೆ ಸ್ಥಳೀಯ ಜ್ಞಾನ ಮತ್ತು ಅದಕ್ಕೆ ಸಂಬಂಧಪಟ್ಟ ನಿರ್ವಚನಗಳು ಕೂಡ ಬದಲಾಗುವುದನ್ನು ನಾವು ಗಮನಿಸಬಹುದು. ಹಾಗಾಗಿ ಲೋಕ ನಿರ್ಮಿತಿ ಎನ್ನುವುದನ್ನು ನಾವು ಒಂದು ಸಮಗ್ರೀಕರಿಸಿದ ಲೋಕ ಎಂದು ಪರಿಗಣಿಸಲು ಸಾಧ್ಯವಿಲ್ಲ. ಮನುಷ್ಯ ಜಗತ್ತಿರಬಹುದು, ಪ್ರಾಣಿ ಜಗತ್ತಿರಬಹುದು ಅಥವಾ ಸಾಮಾಜಿಕ ಸಾಂಸ್ಕೃತಿಕ ಜಗತ್ತಿರಬಹುದು. ಆ ಜಗತ್ತು ರೂಪುಗೊಳ್ಳಬೇಕಾದರೆ ಅಲ್ಲಿನ ಸ್ಥಳೀಯ ಭೌಗೋಳಿಕ ಪ್ರಜ್ಞೆ ಮತ್ತು ಸ್ಥಳೀಯ ಜ್ಞಾನ ತುಂಬಾ ಪರಿಣಾಮಕಾರಿಯಾಗಿ ರೂಪುಗೊಂಡಿರುತ್ತದೆ. ಜಗತ್ತಿನ ಯಾವುದೇ ಶ್ರೇಷ್ಠ ಕೃತಿಗಳನ್ನು ಅವಲೋಕಿಸಿದಾಗ, ಆಕೃತಿಯ ಮೂಲಕ ನಿರ್ವಚನಗೊಳ್ಳುವ ಲೋಕ ಅಲ್ಲಿಯ ಭೌಗೋಳಿಕತೆಯನ್ನು ವಿವರಿಸುತ್ತಲೇ ಅದನ್ನು ಮೀರುವ ಸಮಗ್ರೀಕರಿಸಿದ ಒಂದು ಲೋಕವನ್ನು ರೂಪುಗೊಳಿಸುವ ದೊಡ್ಡ ಸಾಧ್ಯತೆಯಾಗಿದೆ. ಈ ದೃಷ್ಟಿಯಲ್ಲಿ ಕನ್ನಡದ ನವೋದಯದ ದಿಕ್ಸೂಚಿ ಲೇಖಕರು ಎನ್ನುವ ಹಾಗಿರುವ ಕುವೆಂಪು ಅವರ ಬರಹಗಳಿರಬಹುದು, ವೈಚಾರಿಕತೆ ಮತ್ತು ವೈಜ್ಞಾನಿಕ ನೆಲೆಗಟ್ಟಿನ ಬರಹಗಳ ಮೂಲಕ ಕನ್ನಡದ ಮನೆ ಮಾತಾಗಿರುವ ತೇಜಸ್ವಿಯವರ ಸಾಹಿತ್ಯವಿರಬಹುದು. ಅವರು ಎದುರಾಗಿರುವ ಲೋಕ, ಎದುರಾಗುತ್ತಿರುವ ಭೌಗೋಳಿಕ ಪರಿಸರ, ಎದುರಾಗುತ್ತಿರುವ ಸಂಸ್ಕೃತಿ ಅವರ ಬರಹಗಳಲ್ಲಿ ನಿಚ್ಚಳವಾಗಿ ಒಂದು ಲೋಕ ಸೃಷ್ಟಿಯನ್ನು ಮಾಡಿದೆ. ಅದು ಸ್ಥಳೀಯ ಜ್ಞಾನದ ಮೂಲಕವೇ ರೂಪಗೊಂಡಂತಹ ಲೋಕ ಸೃಷ್ಟಿಯಾಗಿದೆ ಮತ್ತು ಆ ಸ್ಥಳೀಯ ಜ್ಞಾನದ ಮೂಲಕವೇ ಒಂದು ಸಾಂಸ್ಕೃತಿಕ, ಸಾಹಿತ್ಯಿಕ, ಸಾಮಾಜಿಕ, ರಾಜಕೀಯ ಪಠ್ಯವನ್ನು ರೂಪಿಸುವಲ್ಲಿ ಅತ್ಯಂತ ಸಶಕ್ತವಾಗಿದೆ ಎಂಬುದನ್ನು ಗಮನಿಸಬಹುದು. ಹಾಗಾಗಿ ಕುವೆಂಪು ಮತ್ತು ತೇಜಸ್ವಿ ಅವರ ಸಮಗ್ರ ಅಭಿವ್ಯಕ್ತಿಯನ್ನು ಗಮನಿಸಿದಾಗ ಲೋಕ ನಿರ್ಮಿತಿಗೆ ಸ್ಥಳೀಯ ಜ್ಞಾನ ಹೇಗೆ ರೂಪುಗೊಳ್ಳಲು ಸಹಕರಿಸುತ್ತದೆ ಎಂಬುದನ್ನು ಇವರ ಕೃತಿಗಳ ಮೂಲಕ ಪ್ರವೇಶವನ್ನು ಪಡೆದಾಗ ಸ್ಥಳೀಯ ಜಗತ್ತೊಂದು ರೂಪುಗೊಳ್ಳುತ್ತಲೇ ಆ ಮೂಲಕ ಒಂದು ವಿಶ್ವಾತ್ಮಕ ಪ್ರಜ್ಞೆಯನ್ನು ನಮಗೆ ಅರ್ಥ ಮಾಡಿಸುವ ಒಂದು ದೊಡ್ಡ ಆಯಾಮವನ್ನು ಒದಗಿಸಿಕೊಡುತ್ತದೆ.

ಕುವೆಂಪು ಅವರು ಎದುರಾದಂತಹ ಮಲೆನಾಡಿನ ಪರಿಸರ ಇರಬಹುದು, ಅದರೊಂದಿಗೆ ಎಣೆಯಲ್ಪಟ್ಟ ಸಂಸ್ಕೃತಿ ಇರಬಹುದು, ಪರಿಸರ ಮತ್ತು ಸಂಸ್ಕೃತಿಯ ಜೊತೆಗೆ ಎಣೆಯಲ್ಪಟ್ಟ ಸ್ಥಳೀಯ ಜ್ಞಾನ, ದೇಸಿ ಜ್ಞಾನ, ಜನರ ಜ್ಞಾನ ಹಲವು ಪಠ್ಯಗಳನ್ನು ರೂಪಿಸುತ್ತಾ ಹೋಗಿ, ಅದು ಸಾಹಿತ್ಯ ಪಠ್ಯಗಳಲ್ಲಿ ನೆಲೆಗೊಂಡು ಒಂದು ಲೋಕ ನಿರ್ಮಿತಿಯನ್ನಾಗಿ ಮಾಡುವುದು ಬಹಳ ಮುಖ್ಯವಾದ ಅಂಶವಾಗಿರುತ್ತದೆ. ಕುವೆಂಪು ಅವರ ಬರಹಗಳು ದೇಶ ಕಾಲವನ್ನು ಮೀರಿದಂತೆ ಇರುತ್ತದೆ. ಮಲೆನಾಡಿನ ಪರಿಸರದ ಬಗ್ಗೆ ವಿವರಣಾತ್ಮಕವಾಗಿ ಇರುವ 'ಮಲೆಗಳಲ್ಲಿ ಮದುಮಗಳು' ಮತ್ತು 'ಕಾನೂರು ಹೆಗ್ಗಡಿತಿ' ಯಂತಹ ಮಹಾ ಕಾದಂಬರಿಗಳನ್ನು ಅವಲೋಕಿಸಿದಾಗ ಮಲೆನಾಡಿನವನಲ್ಲದವನು ಕೂಡ ತನ್ನದಾಗಿಸಿಕೊಳ್ಳುವ ದೊಡ್ಡ ಸಾಮರ್ಥ್ಯವನ್ನು ಹೊಂದಿರುವಂಥ ಪಟ್ಟಿಯು ನಮಗೆ ಎದುರಾಗುತ್ತದೆ. ಅದು ಓದುವವನ

ಲೋಕದೊಳಗಡೆ ಆ ಸ್ಥಳಿಯ ಜ್ಞಾನವನ್ನು ಬಿತ್ತುತ್ತಲೇ ಒಂದು ಲೋಕ ನಿರ್ಮಾಣ ಮಾಡುವ ದೊಡ್ಡ ಶಕ್ತಿ ಆ ಬರಹಗಳಿಗೆ ಇರುವುದನ್ನ ನಾವು ಗಮನಿಸಬಹುದಾಗಿದೆ. ಆ ದೃಷ್ಟಿಯಲ್ಲಿ ಕುವೆಂಪು ಅವರ ಯಾವುದೇ ಬರಹ ಇರಬಹುದು ಅದು ಕಾವ್ಯ, ಮಹಾ ಕಾದಂಬರಿಗಳು, ನಾಟಕಗಳು, ಅಥವಾ ಪಶ್ಚಿಮಾತ್ಯರಿಂದ ಪ್ರಭಾವಿಸಿರುವ ಕೃತಿಗಳು ಆಗಿರಬಹುದು ಅಥವಾ ವಿಮರ್ಶೆ ಇರಬಹುದು. ಯಾವುದೇ ಬಗೆಯ ಪ್ರಕಾರಕ್ಕೆ ಎದುರಾಗಿ ನೋಡಿದಾಗಲೂ ಕೂಡ ಕುವೆಂಪು ಅವರ ಸ್ಥಳೀಯ ಜ್ಞಾನದ ಚಹರೆ ಮತ್ತು ಅವರನ್ನು ಪ್ರಭಾವಿಸಿರುವ ಮಲೆನಾಡಿನ ಚಹರೆಗಳನ್ನು ಅವರ ಸಮಗ್ರ ಬರಹಗಳಲ್ಲಿ ನೋಡಲು ಸಾಧ್ಯವಿದೆ. ಕುವೆಂಪು ಅವರು ಮಾತ್ರವಲ್ಲದೆ ಭಾರತದ ಸಂದರ್ಭದಲ್ಲಿ ನವೋದಯ ಕಾಲಘಟ್ಟದ ಬಹುತೇಕ ಬರಹಗಾರರನ್ನು ಈ ಅಂಶ ಪ್ರಭಾವಿಸಿರುವುದನ್ನು ನಾವು ಗಮನಿಸಬಹುದು. ಯಾವುದೇ ಲೇಖಕ ಅಥವಾ ಬರಹಗಾರ ಸ್ಥಳೀಯತೆಗೆ ಪ್ರಾಮುಖ್ಯತೆಯನ್ನು ಕೊಡುತ್ತಾರೆ.

ರಾಷ್ಟ್ರೀಯತೆಯ ಪ್ರಶ್ನೆ ಎಂದರೆ ಯಾವುದು ಎನ್ನುವ ಚರ್ಚೆ ನವೋದಯ ಸಂದರ್ಭದಲ್ಲಿ ಬಹಳ ಮುಖ್ಯವಾಗಿ ಕಾಣಬಹುದು. ರಾಷ್ಟ್ರೀಯತೆ ಎಂದರೆ, ಸ್ಥಳೀಯ ಜ್ಞಾನದ ಮೂಲಕ, ಪ್ರಾದೇಶಿಕತೆಯ ಮೂಲಕ ರಾಷ್ಟ್ರವನ್ನು ಕಟ್ಟುವುದೇ ರಾಷ್ಟ್ರೀಯತೆ ಎನ್ನುವ ದೊಡ್ಡ ಚರ್ಚೆ ಯಾವುದೇ ಕಾಲಘಟ್ಟದ ಚರ್ಚೆಯಲ್ಲೂ ಸಹ ನಾವು ಸಾಮಾಣ್ಯವಾಗಿ ಗಮನಿಸಬಹುದು. ರಾಷ್ಟ್ರೀಯತೆಯ ಚರ್ಚೆ ಎಂದರೆ ಕೇವಲ ಭಾರತದ ಚರ್ಚೆಯಾಗಿದೆ. ಭಾರತವೆಂದರೆ ಒಂದು ಕೇವಲ ಒಂದು ರಾಷ್ಟ್ರವಲ್ಲ. , ವಿಭಿನ್ನ ಸ್ಥಳೀಯತೆ, ವಿಭಿನ್ನ ಪ್ರಾದೇಶಿಕತೆಯನ್ನು ಒಳಗೊಂಡಿದೆ. ಇದು ಸ್ಥಳೀಯ ಮತ್ತು ಪ್ರಾದೇಶಿಕ ಚರ್ಚೆಗಳ ಜತೆಜತೆಯಾಗಿ ರಾಷ್ಟ್ರೀಯ ಪ್ರಶ್ನೆಯನ್ನು ಪೋಷಿಸುತ್ತದೆ. ಹಾಗಾಗಿ ಜಗತ್ತಿನ ಅರ್ಥವನ್ನು ನಾವು ಹೀಗೆ ಸ್ಥಳೀಯತೆಯೊಂದಿಗೆ ನಿರ್ವಹಿಸಲು ಸಾಧ್ಯವಿದೆ. ಹೀಗೆ ಕುವೆಂಪು ಅವರ ಬರಹ ಮಲೆನಾಡನ್ನು ಎದುರಾಗುತ್ತಿದೆ ಎಂದರೆ, ಮಲೆನಾಡು ಒಂದು ರಾಷ್ಟ್ರವಾಗಿ, ರಾಷ್ಟ್ರೀಯತೆಗೆ ಕೊಡುವ ಒಟ್ಟು ಕೊಡುಗೆಯಾಗಿ ಕಾಣುತ್ತದೆ. ಹಾಗಾಗಿ ರಾಷ್ಟ್ರ ನಿರ್ಮಿತಿ ಮತ್ತು ಲೋಕ ನಿರ್ಮಿತಿ ವ್ಯಾಪಕವಾದ ಪಾರಿಭಾಷಿಕ ಪದಗಳಲ್ಲಿ ನಾವು ಒಂದು ಸಾಹಿತ್ಯ ಪಠ್ಯವನ್ನು ಇಟ್ಟು ನೋಡಬೇಕಾದರೆ ಅತ್ಯಂತ ಸ್ಥಳೀಯ ಸೂಕ್ಷ್ಮ ಪ್ರಶ್ನೆಯಾಗಿಯೂ ಕೂಡ ಅದು ಕೆಲಸ ನಿರ್ವಹಿಸಿರುತ್ತದೆ ಎಂಬುದನ್ನು ನಾವಿಲ್ಲಿ ಗಮನಿಸಬಹುದು. ಇದನ್ನೇ ಕುವೆಂಪು ಅವರು 'ಅಲ್ಪದಲ್ಲಿ ಕಲ್ಪ' ಎನ್ನುವ ಒಂದು ದೊಡ್ಡ ವ್ಯಾಪ್ತಿಯ ಪರಿಭಾಷೆಯನ್ನು ನಾವಿಲ್ಲಿ ಉದಾಹರಿಸಬಹುದು. ಕುವೆಂಪು ಅವರು ಪ್ರಕೃತಿಯನ್ನು ಒಂದು ಸ್ಥಳೀಯ ಜ್ಞಾನವಾಗಿ ಕಂಡಿದ್ದಾರೆ ಎಂಬುದನ್ನ ಅವರ ಎಲ್ಲ ಬರೆಹಗಳಲ್ಲಿಯೂ ಗಮನಿಸಬಹುದು.